ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 158-167
©*IIMRD*, Mysuru
IIMRD JOURNALS
www.iimrd.com

# ದಲಿತ ಸಮುದಾಯಗಳಲ್ಲೊಂದಾದ ಕೂಸ ಜಾತಿಯ ಅಸ್ಮಿತೆ ಮತ್ತು ಹುಡುಕಾಟ : ಚಾರಿತ್ರಿಕ ವಿಶ್ಲೇಷಣೆ

**ತಿಪ್ಪೇಸ್ವಾಮಿ ಎಂ**[*]
[*]ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***ಸಾರಾಂಶ (Abstract)***

*ವರ್ಗ, ವೃತ್ತಿ, ಜಾತಿಯಾಗಿ ಮಾರ್ಪಟ್ಟ ಕಾಲಘಟ್ಟಗಳನ್ನು ಹೊರತುಪಡಿಸಿ ಮೂಲ ವೃತ್ತಿ ಇದ್ದರು–ಇಲ್ಲದಿದ್ದರೂ ತಮ್ಮ ಅಸ್ಥಿತ್ವವನ್ನೇ ಕಾಣದ ಅನೇಕ ಜಾತಿಗಳು ಸಮಾಜದ ಶೋಷಣಾತ್ಮಕ ವ್ಯವಸ್ಥೆಯಲ್ಲಿ ಬದುಕುತ್ತಿವೆ. ಅವುಗಳಲ್ಲಿ ಕೂಸ ಒಂದಾಗಿದೆ. ಕೂಸ ಜಾತಿಗೆ ನಿರ್ಧಿಷ್ಟ ಮೂಲ ಹಿನ್ನೆಲೆಯಾಗಲಿ, ದಾಖಲೆಗಳಲ್ಲಿ ಸ್ಪಷ್ಟತೆ ಸಿಗದಿರುವುದು ದುಃಖಕರ ಸಂಗತಿ. ಕರ್ನಾಟಕದ ಹಲವು ಭಾಗಗಳಲ್ಲಿ ವಾಸಿಸುತ್ತಿರುವ ಇವರು ಬೆರಣಿಕೆಯಷ್ಟು ಜನಸಂಖ್ಯೆಯನ್ನು ಹೊಂದಿದ್ದಾರೆ. ತಮ್ಮ ಮೂಲ ಗೊತ್ತು–ಗುರಿಗಳ ಅರಿವಿಲ್ಲದಂತೆ ಜೀವಿಸುತ್ತಿದ್ದಾರೆ. ತನ್ನದಲ್ಲದ ಕಾರಣಗಳಿಂದ ತನ್ನ ತನವನ್ನು ಮರೆತಿರುವ ಕೂಸ ಜಾತಿ ಮತ್ತು ಜನರ ಬಗ್ಗೆ ಪ್ರಸ್ತುತ ಲೇಖನದಲ್ಲಿ ಪರಿಚಯ ಮತ್ತು ಸಮಸ್ಯೆಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.*

***ಮುಖ್ಯಪದಗಳು* (Keywords):** ಅಸ್ಮಿತೆ ಮತ್ತು ಹುಡುಕಾಟ, ಕೂಸ, ದಲಿತ ಸಮುದಾಯ, ವೃತ್ತಿ.

## ಪೀಠಿಕೆ

ಕೂಸ ಜಾತಿಗೆ ಸಂಬಂಧಿಸಿದಂತೆ ಮೂಲ, ವೃತ್ತಿ ಮತ್ತು ಇತರೆ ಅಂಶಗಳನ್ನು ಕುರಿತು 1909 ರಲ್ಲಿ ಪ್ರಕಟವಾಗಿರುವ ಎಡ್ಗರ್ ಥರ್ಸ್ಟನ್ ಮತ್ತು ಕೆ. ರಂಗಾಚಾರಿರವರ ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾದ (1909). ಏಳು ಸಂಪುಟಗಳಲ್ಲಿ 2 ಮತ್ತು 3 ನೇ ಸಂಪುಟಗಳಲ್ಲಿ ಅಲ್ಪ ಪ್ರಮಾಣದ ಮಾಹಿತಿಯಿದ್ದು, ಕೂಸ ಜಾತಿಯು ಹೊಲಯ ಸಮುದಾಯದ ಉಪಜಾತಿಯಾಗಿದೆ. ಆದರೆ ಇವರು ಹೊಲಯ ಎಂದು ಹೇಳದೆ ಬೆರೊಂದು ಜಾತಿಯವರು ಎಂಬ ಹೇಳಿಕೆ ನೀಡುತ್ತಾರೆಂದು ಉಲ್ಲೇಖಿಸಲಾಗಿದೆ. ಆದರೆ ಸಂಪೂರ್ಣವಾಗಿ ಕೂಸ ಜಾತಿಯ ವಿವರ ನೀಡಿಲ್ಲ. ಇನ್ನು 1994ರಲ್ಲಿ ಪ್ರಕಟವಾಗಿರುವ ಕಮಲಾಕ್ಷ.ಪಿ ರವರ ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ ಪುಸ್ತಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಸ ಜಾತಿ ಎಂಬುವುದು ಇಲ್ಲ ಮತ್ತು ಇದು ಒಂದು ವೃತ್ತಿಯಾಗಿ ಹಲವು ಸಮುದಾಯಗಳಿಗೆ ಸಂಬಂಧಿಸಿದ ಪದವಾಗಿದೆ ಎಂದು ವಿವರಣೆ ನೀಡುತ್ತಾ ಸಾಗಿದೆ. ಈ ಮೇಲ್ಕಂಡ ಪುಸ್ತಕಗಳನ್ನು ಹೊರತು ಪಡಿಸಿದರೆ ಮತ್ತಿತರ ಪುಸ್ತಕಗಳಲ್ಲಿ ಕೂಸ ಜಾತಿಯ ಬಗ್ಗೆ ಬರವಣಿಗೆಗಳಿರುವುದು ವಿರಳ.

*Please cite this article as:* *ತಿಪ್ಪೇಸ್ವಾಮಿ ಎಂ. (2021*). ದಲಿತ ಸಮುದಾಯಗಳಲ್ಲೊಂದಾದ ಕೂಸ ಜಾತಿಯ ಅಸ್ಮಿತೆ ಮತ್ತು ಹುಡುಕಾಟ : ಚಾರಿತ್ರಿಕ ವಿಶ್ಲೇಷಣೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 158–167*

**ಕೂಸ ಜಾತಿಯ ಚಾರಿತ್ರಿಕ ಹಿನ್ನಲೆ**

ಐತಿಹ್ಯವೊಂದರ ಪ್ರಕಾರ ಉಡುಪಿಯ ಕುಂದಾಪುರದ ಕೋಟೇಶ್ವರ ದೈವದ ಕಥೆಯಲ್ಲಿ ತಳಕು ಹಾಕಿಕೊಂಡಿರುವಂತೆ ಒಂಬತ್ತು ಜನ ಅಕ್ಕ–ತಂಗಿಯರು ಇದ್ದರು. ಒಮ್ಮೆ ಒಂಬತ್ತು ಜನ ಅಕ್ಕ–ತಂಗಿಯರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತೆರಳುವಾಗ ಕೊನೆಯ ತಂಗಿಗೆ ಹೊಟ್ಟೆ ಹಸಿಯುತ್ತದೆ. ಕೊನೆಯ ತಂಗಿ ಹೊಟ್ಟೆ ಹಸಿವು ತಾಳಲಾರದೆ ಅಲ್ಲೇ ಕೆರೆಯಲ್ಲಿದ್ದ ಮೀನುಗಳನ್ನು ನೋಡಿ ತಿನ್ನಬೇಕು ಎಂದುಕೊಂಡಳಂತೆ. ಆಗ ತನ್ನ ಮಗನನ್ನು ಮತ್ತು ಕೊರಳಲ್ಲಿದ್ದ ಲಿಂಗವನ್ನು ತೆಗೆದು ಕೆರೆಯ ದಡದಲ್ಲಿ ಇಟ್ಟು, ಮೀನನ್ನು ಹಿಡಿಯಲು ಕೆರೆಯೊಳಗೆ ಇಳಿದಳಂತೆ. ಮೀನನ್ನು ಹಿಡಿಯುವಾಗ ಆ ಲಿಂಗವು ಜಾರಿ ಕೆರೆಯೊಳಗೆ ಬಿದ್ದಿತ್ತಂತೆ. ಇದನ್ನು ಗಮನಿಸದೆ ಮೀನನ್ನು ಹಿಡಿದು ತಿನ್ನುವಷ್ಟರಲ್ಲಿ ಎಂಟು ಜನ ಅಕ್ಕಂದಿರು ತಮ್ಮ ಕೊನೆಯ ತಂಗಿಯನ್ನು ಕೆರೆ ಬಳಿಯಲ್ಲಿಯೇ ಬಿಟ್ಟು ಹೋಗುತ್ತಾರೆ. ತಂಗಿ ಕೆರೆ ದಡದ ಮೇಲೆ ಬಂದಾಗ ಅಕ್ಕಂದಿರಲ್ಲದೆ ದಿಗ್ಭ್ರಾಂತಳಾಗುತ್ತಾಳೆ. ಕೆರೆಯ ದಡದಲ್ಲಿ ಇದ್ದ ಲಿಂಗವು ಕಾಣೆಯಾಗಿರುತ್ತದೆ. ಅಲ್ಲಿಯೇ ಇದ್ದ ತನ್ನ ಮಗುವನ್ನು ಎತ್ತುಕೊಂಡು ಸಮೀಪದಲ್ಲಿದ್ದ ಸವರ್ಣಿಯರ ಮನೆಗೆ ತೆರಳುತ್ತಾಳೆ. ಅಲ್ಲಿನ ಗೌಡತಿಗೆ **"**ಅಮ್ಮಾ ನನ್ನ ಮಗುವಿಗೆ ಊಟ ಕೊಡಿ**"**. ಎಂದು ಕೇಳಿದಾಗ ಈಕೆಯನ್ನು ನೋಡಿದ ಗೌಡತಿ ಒಂದೆಡೆ ಕೂಸನ್ನು ಸೊಂಟದ ಮೇಲೆ ಕೂರಿಸಿಕೊಂಡಿದ್ದರಿಂದ ಮತ್ತು ಆಳಾಗಿ ಕೆಲಸ ಕೇಳಲು ಬಂದಿರುವುಳೆಂದು ತಿಳಿದು ನಿನು **"ಕೂಸಾಳ"** ಎಂದು ಕೇಳುತ್ತಾಳೆ. ಆಗ ಈಕೆ ಹೌದು ಎನ್ನುತಾಳೆ. ಹೀಗೆ ಕೂಸಾಳು ಎಂಬ ವರ್ಗ ಹುಟ್ಟಿಕೊಂಡಿತು ಎಂಬ ಪ್ರತೀತಿ ಇದೆ. ಇಲ್ಲಿ **"ಕೂಸ"** ಎನ್ನುವುದಕ್ಕೆ ಚಿಕ್ಕವನು, ಬಾಲಕ ಎಂಬರ್ಥವಿದ್ದರೆ, **"ಆಳು"** ಎಂಬುದಕ್ಕೆ ಕೂಲಿಯವನು, ಕೆಲಸಗಾರ ಎಂಬರ್ಥವಿದ್ದು, ಈ ಎರಡು ಪದದ ಅರ್ಥಗಳೇ ಮುಂದಿನ ಕೂಸಾಳು ಆಗಿ ಪರಿವರ್ತನೆಗೊಂಡಿರಬಹುದು. ಎಡ್ಗರ್ ಥರ್ಸ್ಟನ್‌ರವರು "It is noted by the Rev. J. Cain that "members of this caste are found chiefly in attendance on zamindars and other rich people, and report says that they are not unfrequently their illegitimate children." Khasa is synonymous with Adapapa" [1]. ಇಲ್ಲಿ ಖಾಸ ಜಾತಿಯ ಬಗ್ಗೆ ಹೇಳುತ್ತಾ ಮೇಲ್ವರ್ಗದ ಶ್ರೀಮಂತರು ಮತ್ತು ಜಮೀನ್ದಾರರ ಮನೆಗಳಲ್ಲಿ ಕೆಲಸಗಾರರಾಗಿರುತ್ತಾರೆ. ವರದಿಯ ಪ್ರಕಾರ ಇವರಲ್ಲಿ ಬಹುತೇಕರು ತಮ್ಮ ಮಾಲೀಕರ ಅಕ್ರಮ ಸಂತಾನದವರಾಗಿದ್ದು, ಖಾಸ ಎಂಬುದು ಆಡಪಾಪ ಎಂಬುದರ ಸಮಾನಾರ್ಥಕವಾಗಿದೆ. ಎಂದು ಉಲ್ಲೇಖಿಸಿದ್ದಾರೆ. ಈ ಖಾಸ ಜಾತಿಯೇ ಕೂಸ ಎಂದು ಶಂಕಿಸಬಹುದು. ಏಕೆಂದರೆ ಎರಡರ ವಿವರಣೆಗಳಲ್ಲಿ ಮನೆಯ ಕೆಲಸದ ಬಗ್ಗೆ ಉಲ್ಲೇಖಿಸಲಾಗಿದೆ.

**ಕೂಸ ಜಾತಿಯ ಜನಸಂಖ್ಯೆ**

ಪ್ರಸ್ತುತ ಪರಿಶಿಷ್ಟ ಜಾತಿಯಲ್ಲಿರುವ 101 ಜಾತಿಗಳ ಪಟ್ಟಿಯಲ್ಲಿ ಕೂಸ ಜಾತಿಯು ಒಂದು. ಜನಗಣತಿ ವರದಿ ಪ್ರಕಾರ ಕರ್ನಾಟಕದ 15 ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. 108 ಪುರುಷರು, 94 ಮಹಿಳೆಯರನ್ನೊಳಗೊಂಡಂತೆ ಇವರ ಒಟ್ಟು ಜನಸಂಖ್ಯೆ 202. ಜಿಲ್ಲಾವಾರು ಗಮನಿಸಿದಾಗ ಉಡುಪಿಯಲ್ಲಿ 50 ಪುರುಷರು ಮತ್ತು 49 ಮಹಿಳೆಯರನ್ನೊಳಗೊಂಡಂತೆ ಒಟ್ಟು 99 ಜನಸಂಖ್ಯೆಯೊಂದಿಗೆ ಮೊದಲ

ಸ್ಥಾನದಲ್ಲಿದೆ. ಉಳಿದಂತೆ ಇತರೆ 14 ಜಿಲ್ಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿದೆ. ಆದರೆ ಮೂಲತಃ ಕೂಸ ಜಾತಿಯವರು ಆದಿದ್ರಾವಿಡ ಎಂದು ಎಲ್ಲೆಡೆ ಹೇಳುತ್ತಿರುವಾಗ, ಜಾತಿ ಪ್ರಮಾಣಪತ್ರ, ಇತರೆ ಸರ್ಕಾರಿ ಸೌಲಭ್ಯಗಳನ್ನು ಆದಿದ್ರಾವಿಡವೆಂದು ಹೊಂದಿರುವಾಗ ಈ 202 ಜನಸಂಖ್ಯೆ ಮೂಲ ಕೂಸ ಜಾತಿಯವರೆ ಅಥವಾ ಕೂಸ ಎಂದು ಹೇಳುವ ಪರ್ಯಾಯ ಸಮುದಾಯದವರೇ ಎನ್ನುವುದು ಚರ್ಚಿಸಬೇಕಾದ ಸಂಗತಿಯಾಗಿದೆ.

**ಕೋಷ್ಟಕ 1: ಕರ್ನಾಟಕ ರಾಜ್ಯದಲ್ಲಿ ಕಂಡುಬರುವ ಕೂಸ ಜಾತಿಯ ಜಿಲ್ಲಾವಾರು ಜನಸಂಖ್ಯೆ.**

| ಕ್ರ ಸಂ | ಜಿಲ್ಲೆಯ ಹೆಸರು | ಪ್ರದೇಶವಾರು ಕೂಸ ಜನಸಂಖ್ಯೆ | | ಲಿಂಗವಾರು ಕೂಸ ಜನಸಂಖ್ಯೆ | | |
|---|---|---|---|---|---|---|
| | | ಗ್ರಾಮೀಣ | ನಗರ | ಪುರುಷ | ಮಹಿಳೆ | ಒಟ್ಟು |
| 1 | ಕೊಪ್ಪಳ | 2 | 0 | 1 | 1 | 2 |
| 2 | ಧಾರವಾಡ | 0 | 2 | 1 | 1 | 2 |
| 3 | ಹಾವೇರಿ | 1 | 0 | 0 | 1 | 1 |
| 4 | ಚಿತ್ರದುರ್ಗ | 3 | 0 | 3 | 0 | 3 |
| 5 | ಶಿವಮೊಗ್ಗ | 4 | 1 | 2 | 3 | 5 |
| 6 | ಉಡುಪಿ | 99 | 0 | 50 | 49 | 99 |
| 7 | ಚಿಕ್ಕಮಗಳೂರು | 44 | 0 | 21 | 23 | 44 |
| 8 | ಬೆಂಗಳೂರು | 1 | 33 | 23 | 11 | 34 |
| 9 | ಮೈಸೂರು | 0 | 1 | 1 | 0 | 1 |
| 10 | ಕೋಲಾರ | 1 | 0 | 0 | 1 | 1 |
| 11 | ಚಿಕ್ಕಬಳ್ಳಾಪುರ | 1 | 0 | 1 | 0 | 1 |
| 12 | ಬೆಂಗಳೂರು ಗ್ರಾಮಾಂತರ | 1 | 0 | 1 | 0 | 1 |
| 13 | ಬೆಳಗಾವಿ | 0 | 3 | 2 | 1 | 3 |
| 14 | ಬಿಜಾಪುರ | 0 | 1 | 0 | 1 | 1 |
| 15 | ರಾಮನಗರ | 0 | 4 | 2 | 2 | 4 |
| **ಒಟ್ಟು** | | **157** | **45** | **108** | **94** | |

ಮೂಲ: ಭಾರತದ ಜನಗಣತಿ ವರದಿ–2011,

**ಕೂಸ ಜಾತಿಯ ಸಾಮಾಜಿಕ ವ್ಯವಸ್ಥೆ**

ಪ್ರಸ್ತುತ ಕರ್ನಾಟಕದಲ್ಲಿ ಪಿತೃ ಪ್ರಧಾನ ಕುಟುಂಬವನ್ನು ಕಾಣುತ್ತೇವೆ. ಆದರೆ ಕೂಸ ಜಾತಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಯಲ್ಲಿ ಮಾತೃಪ್ರಧಾನ ವ್ಯವಸ್ಥೆ ಮತ್ತು ಅಳಿಯ ಸಂತಾನ ಪದ್ಧತಿ ಅಸ್ಥಿತ್ವದಲ್ಲಿರುವುದನ್ನು ಕಾಣಬಹುದಾಗಿದೆ. ಇತರ ಸಮುದಾಯಗಳಲ್ಲಿರುವಂತೆ ಕೂಸ ಜಾತಿಯಲ್ಲಿಯೂ

ಕೂಡ ಬಾಲ್ಯ ವಿವಾಹ ಪದ್ಧತಿ, ವಯಸ್ಕರ ವಿವಾಹ, ವಿಧವೆಯರ ವಿವಾಹ, ಸಂತಾನ ಪ್ರಾಪ್ತವಾಗದಿದ್ದಲ್ಲಿ ಪುನರ್ ವಿವಾಹ ಜಾರಿಯಲ್ಲಿದ್ದವು. ಕೂಸ ಜಾತಿಯಲ್ಲಿ ಕಂಡುಬರುವ ಕೋಟೆನ್, ಕುಂದಾರ್, ಅಮಿನ್, ಗಂಗರ, ಕಾಸರ, ಮುಡುತ್ತುನ್ನಾ, ಸಿರಿನಾ, ತೋಳಾರ್, ಶೆಟ್ಟಿಲೇರು, ಓಲೆ, ಥೆಂದಿ, ಹಲ್ಸನಾ, ಸುವರ್ಣ, ಕರ್ಕೆರಾ, ಸಾಲಿಯಾನ್, ಮೆಂಡನ್ ಮುಂತಾದ ಬಳಿಗಳಿದ್ದು, ಇಂದಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ಸಮುದಾಯಗಳಲ್ಲಿಯೂ ಕೂಡ ಈ ಬಳಿಗಳನ್ನು ಕಾಣಬಹುದಾಗಿದೆ. ಕರ್ನಾಟಕದ ಘಟ್ಟ ಪ್ರದೇಶವನ್ನು ಹೊರತುಪಡಿಸಿ ಇನ್ನಿತರ ಭಾಗಗಳಲ್ಲಿ ವ್ಯಕ್ತಿಯು ತನ್ನ ತಂದೆಯ ಬಳಿಯನ್ನು ತನ್ನ ಬಳಿ ಎಂದು ಹೇಳುತ್ತಾರೆ. ಆದರೆ ಘಟ್ಟದ ಕೆಳಭಾಗದಲ್ಲಿ ತನ್ನ ತಾಯಿಯ ಬಳಿಯನ್ನು ತನ್ನ ಬಳಿ ಎಂದು ಹೇಳುತ್ತಾರೆ.

**ಕೂಸ ಜಾತಿಯ ದೈವಗಳು**

ಕೂಸ ಜಾತಿಯವರು ತಾಯಿಯ ಮನೆಯ ದೇವರುಗಳನ್ನೇ ಮುಂದಿನ ಪೀಳಿಗೆಯ ದೈವಗಳನ್ನಾಗಿ ಮುಂದುವರೆಸಿಕೊಂಡು ಸಾಗುತ್ತಾರೆ. ಇವರು ಕಲ್ಲುಕುಟಿಗ, ನಾಗ, ಹೈಗೂಳಿ, ಯಕ್ಷಿ, ಮಾಸ್ತಿ, ಪಂಜುರ್ಲಿ, ಜಟ್ಟಿಗ, ಕುಸಲಾ, ಮಾಲಾತಿ, ಹಾಳೆಮನೆದೆಯ್ಯ, ಬಬ್ಬು, ಗುನ್ನಿಗ, ಚಾಮುಂಡಿ, ಕೊರೆಗಜ್ಜ ಮುಂತಾದ ದೇವರುಗಳನ್ನು ಆರಾಧನೆ ಮಾಡುತ್ತಾರೆ. ಈ ದೇವರುಗಳು ಕೂಸ ಜಾತಿಗೆ ಅಷ್ಟೇ ಅಲ್ಲದೆ ಹಲವಾರು ಜಾತಿಗಳಿಗೆ ಬಳಿ/ಮನೆ ದೈವಗಳಾಗಿ ಪೂಜಿಸಲ್ಪಡುತ್ತಿವೆ. ವಿಶೇಷವಾಗಿ ಕುಸಲಾ ಮತ್ತು ಹೊಲೆಟರ್ ಎಂಬ ದೈವಗಳು ಘಟ್ಟದ ಕೆಳಭಾಗದ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಪೂಜಗೇರಿ ಗ್ರಾಮದ ಬೀದಿಬೀರ ದೇವಸ್ಥಾನದಲ್ಲಿ ಕಾಣಸಿಗುತ್ತವೆ. ಈ ಪೂಜಗೇರಿ ಗ್ರಾಮಸ್ಥರ ಹೇಳಿಕೆಯ ಪ್ರಕಾರ ಕುಸಲಾ ದೈವವು ಕೂಸ ಜಾತಿಯವರ ಮೂಲ ದೇವತೆ ಎಂಬ ಕಲ್ಪನೆ ಇದೆ. ಇನ್ನೂ ಹೊಲೆಟರ್ ಎಂಬ ದೈವವು ಹೊಲೆಯ ಸಮುದಾಯದ ದೈವವಾಗಿದೆ. ಈ ಎರಡು ದೈವಗಳು ಇಂದಿಗೂ ಪೂಜಿಸಲ್ಪಡುತ್ತಿವೆ. ಕುಸಲಾ ದೈವವು ಗುಡಿಯ ಒಳಭಾಗದಲ್ಲಿದ್ದು, ಹೊಲೆಟರ್ ದೈವವು ಗುಡಿಯ ಹೊರಭಾಗದಲ್ಲಿ ಅಂದರೆ ಕುಸಲಾ ದೈವದ ಕಾವಲುಗಾರನಂತೆ ಕುಳ್ಳಿರಿಸಿ ಪೂಜೆಮಾಡಲಾಗುತ್ತಿದೆ. ಕುಸಲಾ ದೈವಕ್ಕೆ ಬಲಿ ಪದ್ಧತಿ ನಿಷೇದವಿದ್ದು, ಹೊಲೆಟರ್ ದೈವಕ್ಕೆ ಬಲಿ ಪದ್ಧತಿಯನ್ನು ಹೊಂದಿದೆ. ಹೊಲೆಯರು ಮತ್ತು ಕೂಸಗಳಿಗೆ ಸಂಬಂಧವಿದೆ ಎನ್ನುವುದಕ್ಕೆ ಮೇಲಿನ ದೈವಗಳು ಸಾಕ್ಷಿಯಾದರೆ. 1901ರ ಜನಗಣತಿ ವರದಿಯಲ್ಲಿ ಬಲಗೈ, ಬಾಕುಡ, ಬೆಗಾರ ಅಥವಾ ಬ್ಯಾಗಾರ, ಕೂಸ (ಉಪ್ಪಾರ), ಮೈಲ ಮತ್ತು ರಾಣಿವಯ(ರಾಣಿಗೆ ಸೇರಿದವನು) ಮುಂತಾದವುಗಳು ಹೊಲೆಯರ ಉಪಜಾತಿಗಳೆಂದು ದಾಖಲಾಗಿದೆ.[3]

ಆದರೆ ಪ್ರಸ್ತುತ ಕೂಸ ಜಾತಿಯವರ ಪ್ರಕಾರ ಕೂಸ ಮತ್ತು ಹೊಲೆಯ ಜಾತಿಗಳಿಗೆ ಯಾವುದೇ ಸಂಬಂಧವಿಲ್ಲ. ಕೂಸ ಜಾತಿಯೇ ಬೇರೆ ಮತ್ತು ಹೊಲೆಯ ಸಮುದಾಯವೇ ಬೇರೆ. ಈ ಎರಡರ ನಡುವೆ ಯಾವುದೇ ರೀತಿಯ ಸಂಬಂಧಗಳನ್ನು ಹೊಂದುವುದಿಲ್ಲ. "The Kusa Holeyas speak Canarese. They object to carrying articles with four legs, unless the legs are crossed. They do not eat beef, and will not touch leather. They consider themselves to be superior to the other sections of Holeyas, and use as an argument that their caste name is Uppara, and not Holeya. Why they are called Uppara is not clear, but some say that they are the same as

the Upparas (salt workers) of Mysore, who, in South Canara, have descended in the social scale." [4] ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಕೂಸ ಜಾತಿಯವರು ಹೊಲೆಯರಲ್ಲ, ಉಪ್ಪಾರರು ಎಂದು ಹೇಳಿಕೆ ನೀಡಲಾಗಿದೆ. ಇಲ್ಲಿ ಕೂಸ ಎಂದು ಹೇಳದೆ ಉಪ್ಪಾರ ಎಂದು ಹೇಳಿಕೆ ನೀಡಲು ಕಾರಣಗಳೇನು ಎಂಬುವುದು ಸ್ಪಷ್ಟವಾಗಿಲ್ಲ. ಕೆಲವು ಹೇಳಿಕೆಗಳ ಪ್ರಕಾರ ಮೈಸೂರು ಪ್ರಾಂತ್ಯದ ಉಪ್ಪಾರರಿಗೂ ಮತ್ತು ಕೂಸದವರ ಹೋಲಿಕೆಗಳಲ್ಲಿ ಸಾಮ್ಯತೆ ಇರುವುದರಿಂದ ಉಪ್ಪಾರರು ಎಂದು ಹೇಳಿರಬಹದು. ದಕ್ಷಿಣ ಕನ್ನಡದಲ್ಲಿ ಕೂಸ ಜಾತಿಯವರು ಸಮಾಜದ ಇತರೆ ಜಾತಿಗಳಿಗಿಂತ ಕೆಳಮಟ್ಟದಲ್ಲಿ ಇರಿಸಲಾಗಿದೆ. ಆದರೆ ಸಿರಸಿಯ ಬಿಳಲೆ ಗ್ರಾಮದ ವೃದ್ಧೆ 110 ವರ್ಷದ ಶೇಶಿರವರ ಪ್ರಕಾರ "ನಾವು ಉಪ್ಪಾರರು. ಲಿಂಗಧಾರಣೆ ಮಾಡಿದವರು. ನಮಗಿಂತ ಕೂಸ ಜಾತಿಯವರು ಚಿಕ್ಕವರು. ಉಪ್ಪಾರ ಮತ್ತು ಕೂಸಗಳಿಗೆ ಯಾವುದೇ ರೀತಿಯ ಸಂಬಂಧವಿಲ್ಲ. ಘಟ್ಟದ ಕೆಳಭಾಗದಲ್ಲಿ ಕೂಸಗಳಿದ್ದು, ಘಟ್ಟದ ಮೇಲ್ಭಾಗದಲ್ಲಿ ಕೂಸಗಳಿಲ್ಲ" ಎನ್ನುವ ಹೇಳಿಕೆಗಳಲ್ಲಿ ಬಹುಷಃ ಕೂಡ್ಲಿ ಮಠದ ಭಕ್ತರಾಗಿದ್ದ ಉಪ್ಪಾರರಿಗೆ ಲಿಂಗಧಾರಣೆ ಆಗಿರಬಹುದು. ಈ ಲಿಂಗಧಾರಣೆ ಕಲ್ಪನೆಗಳಿಂದ ಇವರಿಗೆ ಲಿಂಗಾಯಿತ ಉಪ್ಪಾರರು ಅಥವಾ ಸಾಮಾಜಿಕ ವರ್ಗದಲ್ಲಿ ಮೇಲು ಎನ್ನುವ ಪರಿಕಲ್ಪನೆ ಬಂದಿರಬಹುದು. ಇದಕ್ಕೆ ಪುಷ್ಟಿಕೊಡುವಂತೆ ಎಡ್ಗರ್ ಥರ್ಸ್ಟನ್‌ರವರು ತಮ್ಮ ಪುಸ್ತಕದಲ್ಲಿ "The headman of the Kusa Holeyas is called Buddivant. As they are disciples of a Lingayat priest at the mutt at Kudli in Mysore, they are Saivites. Every family has to pay the priest a fee of eight annas on the occasion of his periodical visitations." [5] ಕೂಸ–ಹೊಲೆಯ ಜಾತಿಯವರುವರು ತಮ್ಮ ಜಾತಿಯ ಮುಖ್ಯ ವ್ಯಕ್ತಿಯನ್ನು ಬುದ್ಧಿವಂತ ಎಂದು ಕರೆಯುತ್ತಾರೆ. ಈ ಜಾತಿಯವರು ಮೈಸೂರಿನ ಕುಡ್ಲಿ ಮಠದ ಲಿಂಗಾಯಿತ ಗುರುಗಳ ಭಕ್ತರಾಗಿದ್ದು, ಕೂಸ ಜಾತಿಯವರು ಶೈವಪಂಥದವರಾಗಿದ್ದಾರೆ. ಈ ಕುಡ್ಲಿ ಮಠದ ಲಿಂಗಾಯಿತ ಗುರುಗಳ ನಿಗಧಿತ ಭೇಟಿಯ ಸಂದರ್ಭದಲ್ಲಿ ಪ್ರತಿಯೊಂದು ಕುಟುಂಬವು ಕೂಡ ಎಂಟು ಆಣೆ (ಐವತ್ತು ಪೈಸೆ) ಕಾಣಿಕೆಯನ್ನು ನೀಡಬೇಕಾಗುತ್ತದೆ ಎಂದು ದಾಖಲಿಸಿದ್ದು, ಕಾಲ ಉರುಳಿದಂತೆ ಹಲವು ಮಾರ್ಪಾಡುಗಳಾಗಿವೆ. ಇಂದು ಜಾತಿಗೊಂದು ಸ್ವಾಮೀಜಿ ಬೀದಿಗೊಂದು ಮಠ ಎನ್ನುವ ಕಲ್ಪನೆಗಳು ಬೆಳೆಯುತ್ತಿರುವುದರಿಂದ ಮತ್ತು ಆಧುನೀಕರಣದ ಪ್ರಭಾವದಿಂದ ಸಂಸ್ಕೃತಿ ಮರೆಮಾಚಿರಬಹುದು. ತಮ್ಮ ಮೂಲದ ಅರಿವಿಲ್ಲದೆ ನಶಿಸಿರಬಹುದು.

**ಕೂಸ ಜಾತಿಯವರ ವೃತ್ತಿ**

ಸಮಾಜದ ಹಲವು ಸಮುದಾಯಗಳು ತನ್ನದೆ ಆದ ವೃತ್ತಿ ಆಧಾರದ ಮೆಲೆ ಜಾತಿಯಾಗಿ ಮಾರ್ಪಾಡು ಹೊಂದಿವೆ. ಕೆಲವು ಜಾತಿಗಳಿಗೆ ವೃತ್ತಿ ಇಲ್ಲದೆ ಇತರೆ ಜಾತಿಗಳು ಮಾಡುತ್ತಿದ್ದ ವೃತ್ತಿಯನ್ನೇ ಅವಲಂಬಿಸಿರುವುದನ್ನು ಚರಿತ್ರೆ ಪುಟಗಳಲ್ಲಿ ಕಾಣುತ್ತೇವೆ. ಹಾಗೆಯೇ ಈ ಕೂಸ ಜಾತಿಗೆ ಮೂಲ ವೃತ್ತಿ ಕಂಡುಬರುವುದಿಲ್ಲ. ಆದರೆ ಈ ಜಾತಿಯವರು ಕರಾವಳಿ ಭಾಗದಲ್ಲಿ ನೆಲೆಯೂರಿರುವುದರಿಂದ ಕರಾವಳಿ ಭಾಗದಲ್ಲಿ ಸಿಗುವ ಬೆಳಚಿನಿಂದ ಸುಣ್ಣ ತಯಾರಿಸಿ ಜೀವನ ಸಾಗಿಸುತ್ತಾರೆ. ಸುಣ್ಣದ ಜೊತೆಯಲ್ಲಿ ಕೃಷಿ ಕೂಲಿ, ಕೃಷಿಯೇತರ ಕೂಲಿ, ಕೀಟಗಳ ಕಡಿತಕ್ಕೆ ಔಷಧಿ ನೀಡುವುದು, ಮೀನು ಮಾರಾಟ, ಇತ್ಯಾದಿ ಕೆಲಸದಲ್ಲಿಯು ತೊಡಗಿದ್ದಾರೆ.

**ಕೂಸ ಜಾತಿಯವರು ದಲಿತ ಸಮುದಾಯಕ್ಕೆ ಸೇರಿದ ಅಸ್ಪೃಷ್ಯರೇ?**

ದಲಿತ ಎಂಬ ಪದದ ಬಗ್ಗೆ ಅನೇಕ ಗೊಂದಲಗಳಿದ್ದು ಇಂದಿಗೂ ಚರ್ಚಾಗ್ರಹಿತ ವಿಚಾರವಾಗಿದೆ. "ದಲಿತರು ಒಂದು ವರ್ಗವೇ ಅಥವಾ ಜಾತಿಯೇ? ಎಂಬ ಪ್ರಶ್ನೆಗಳಿಗೆ ವಿದ್ವಾಂಸರಲ್ಲಿ ಅನೇಕ ಗೊಂದಲಗಳಿವೆ. ಸಂಕುಚಿತ ಅರ್ಥದಲ್ಲಿ ದಲಿತರು ಎಂದರೆ ಕೇವಲ ಅಸ್ಪೃಶ್ಯರು ಮಾತ್ರ ಎನ್ನಬಹುದು. ವಿಶಾಲವಾದ ಅರ್ಥದಲ್ಲಿ ದಲಿತರು ಎಂದರೆ ಎಲ್ಲಾ ಜಾತಿಯ ಬಡವರು ಎಂದು Deprived castes, Oppressed Suppressed caste ಸಂದರ್ಭಕ್ಕೆ ತಕ್ಕಂತೆ ವ್ಯಾಖ್ಯಾನಿಸಿದ್ದರು. ಆದರೆ ಸಾಮಾನ್ಯ ಅರ್ಥದಲ್ಲಿ ದಲಿತರು ಎಂದರೆ 'ಶೋಷಿತರು' ಅವಮಾನಕ್ಕೆ ಒಳಗಾದವರು, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ತೀರ ಕೆಳಮಟ್ಟದಲ್ಲಿ ಇರುವವರು ಎಂದು ಹೇಳಲಾಗುತ್ತದೆ." [6] ಘಟ್ಟ ಪ್ರದೇಶಗಳಲ್ಲಿಯೇ ಕೂಸ ಪದದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಘಟ್ಟದ ಕೆಳಭಾಗದಲ್ಲಿ ಕೂಸದವರನ್ನು ಅಂತ್ಯಂತ ಕೀಳಾಗಿ ಕಾಣುತ್ತಿದ್ದರಂತೆ. ಇದು ಇನ್ನೂ ಹಾಗೇ ಮುಂದುವರೆದಿದೆ. ಪ್ರಸ್ತುತ ಕೂಸ ಎಂಬ ಪದವನ್ನು ಯಾರು ಸಹ ಉಚ್ಚರಿಸುವಂತಿಲ್ಲ. "ಕುಂದಾಪುರ ಕಡೆಯ ಅಸ್ಪೃಶ್ಯ ವರ್ಗದವರನ್ನು ಕೂಸಾಳರು ಎಂದು ಕರೆಯುವರು". [7] ಕೂಸ ಎಂದರೆ ಘಟ್ಟದ ಕೆಳಗಿನವರಿಗೆ ಎಲ್ಲಿಲ್ಲದ ಸಿಟ್ಟು. ಈ ಸಿಟ್ಟಿಗೂ ಒಂದು ಕಾರಣವಿದೆ. ಅನಾದಿ ಕಾಲದಿಂದಲೂ ಇವರನ್ನೂ ಸವರ್ಣಿಯರು ಶೋಷಿಸುತ್ತಾ, ತಮ್ಮ ವೈಭೋಗಕ್ಕೆ ತಕ್ಕಂತೆ ಬಳಸುತ್ತಾ ಕೂಸ ವರ್ಗವನ್ನು ಹಿಂಸಿಸಲಾಗಿದೆ. ಸಮಾಜದ ಕಟ್ಟುಪಾಡುಗಳಲ್ಲಿ ಶೋಷಣೆಗೆ ಒಳಗಾದವರು ಕೂಸ. ಇವರಿಗೆ ಗೆರಟೆಯಲ್ಲಿ ಚಹಾ, ಕಾಫಿ, ನೀರನ್ನು ನೀಡುತ್ತಿದ್ದರಂತೆ. ಅಡಿಕೆ ಗಿಡದ ಹೊಂಬಾಳೆ ತೊಟ್ಟು, ಬಾಳೆ ಎಲೆ ಇಲ್ಲವೇ ಕೆಳವರ್ಗದವರಿಗೆಂದೆ ಮೀಸಲೀರಿಸಿದ ಪ್ರತ್ಯೇಕ ಮಣ್ಣಿನ ಮತ್ತು ಲೋಹದ ತಟ್ಟೆಗಳಲ್ಲಿ ಊಟ ಮಾಡಬೇಕಾಗಿತ್ತು. ಊಟ ಮಾಡಿದ ನಂತರ ಸವರ್ಣಿಯರ ಮನೆಯ ಅಂಗಳಕ್ಕೆ ಸಗಣಿ ಸಾರಿಸಬೇಕಾಗಿತ್ತು. ಮಾರಿ ದೇವತೆಗೆ ಬೆತ್ತಲೆ ಸೇವೆ ಮಾಡುವುದು ಮತ್ತು ಕೆಳವರ್ಗದ ಸಮುದಾಯದವರಿಗೆ ಭೂತ ಬರುವುದು ಇವೆಲ್ಲವು ಕೂಸ ಮತ್ತು ಕೆಳವರ್ಗಗಳ ಶೋಷಣೆಯ ಬದುಕಿನ ಅನಾವರಣಗಳಾಗಿವೆ. ಸವರ್ಣಿಯರ ಮನೆಗಳಲ್ಲಿ ಸತ್ತ ಶವಕ್ಕೆ ಕುಣಿ ತೆಗೆಯುವುದು, ಶವ ಸುಡಲು ಕಟ್ಟಿಗೆ ಕಡಿಯುವುದು, ಸೂತಕದ 13 ದಿನಗಳ ಕಾಲವು ಸರ್ವಣಿಯರ ಮನೆಯ ಮುಂದೆ ಡೋಲು ಬಾರಿಸುವುದು ಇದ್ದವು. ಅಸ್ಪೃಷ್ಯತೆ ಇವರನ್ನು ಬೆನ್ನು ಬಿಡದೇ ಕಾಡಿತ್ತು. ಅನಾದಿ ಕಾಲದಿಂದಲೂ ಶೋಷಣಾತ್ಮಕ ಜೀವನ ನಡೆಸಿದವರು. ಪ್ರಸ್ತುತ ಕೂಸಗಳು ಭಾರತ ಸರ್ಕಾರದ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಇದ್ದಾರೆ. ಪ್ರಸ್ತುತ 1989 ಕೇಂದ್ರ ಅಧಿನಿಯಮ ಸಂಖ್ಯೆ 33 ರ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ದೌರ್ಜನ್ಯ ಪ್ರತಿಬಂಧಕ ಅಧಿನಿಯಮದ ಪ್ರಕಾರ ಜಾತಿನಿಂದನೆ ಪ್ರಕರಣ ದಾಖಲಿಸುವ ಹಕ್ಕನ್ನು ಹೊಂದಿದ್ದಾರೆ.

ಸಾಮಾಜಿಕ ಅಸಮತೋಲನದ ನಡುವೆ ಶೋಷಣಾತ್ಮಕ ಸ್ಥಾನವನ್ನು ಹೊಂದಿದ್ದ ಕೂಸಗಳು ಕಾಲಾಂತರಗಳಲ್ಲಿ ಮತಾಂತರ ಹಾದಿ ತುಳಿಯುತ್ತಾ ಸಾಗಿದ್ದಾರೆ. ತಮ್ಮ ಜಾತಿಯ ಹೆಸರಿಗೆ ಅಂಟಿರುವ ಅಸ್ಪೃಷ್ಯ ಆಚರಣೆಯಿಂದ ಹೊರಬರಲು ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಸರಿಸಮಾನರಾಗಿ ಬಾಳಲು ಕೂಸ ಎಂಬುದರ ಪರ್ಯಾಯವಾಗಿ ಆದಿದ್ರಾವಿಡರೆಂದು ಕರೆದುಕೊಳ್ಳುತ್ತಾರೆ. ಆದರೆ ಕೂಸ ಜಾತಿಯವರು

ಮೂಲ ಆದಿದ್ರಾವಿಡ ವರ್ಗದವರಲ್ಲ. "ಸರ್ವಸಾಮಾನ್ಯವಾಗಿ ಉಪ್ಪಾರ ಎಂದು ಕರೆಯುವ ಪಂಗಡದವರನ್ನು ಹಾಗೂ ಬತ್ತಡ ಮತ್ತು ಮೇರ ಜಾತಿಯ ಪಂಗಡದವರನ್ನು ಕುಂದಾಪುರ ಕಡೆ ಕೂಸಾಳರು ಎಂಬುದಾಗಿ ಕರೆಯುವರೆಂದು ಹೇಳಲಾಗಿದೆ. ಕೂಸ ಎಂಬ ಪ್ರತ್ಯೇಕ ಪಂಗಡವಾಗಲೀ, ಉಪಜಾತಿಯಾಗಲೀ ಜಿಲ್ಲೆಯಲ್ಲಿ ಇಲ್ಲವೆಂದು ಪ್ರಸುತ ತಿಳಿದುಬಂದಿದೆ"[8] ಇಂದಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದಲ್ಲಿರುವ ಹಲವು ಜಾತಿಗಳು ಈ ಕೂಸಾಳು ಕೆಲಸದಿಂದ ಹೊರಬಂದು ಬೇರೆ ಕೆಲಸದಿಂದ ಪ್ರತ್ಯೇಕ ಹೆಸರನ್ನು ಪಡೆದುಕೊಂಡಿವೆ.

**ಸಮಾರೋಪ**

ಅನಾದಿಕಾಲದಿಂದಲೂ ತನ್ನ ಅಸ್ಮಿತೆಯನ್ನು ಕಾಣದೆ ಅನ್ಯ ಸಮುದಾಯದ ಗುರುತಿನಲ್ಲಿ ಅಲೆಮಾರಿಯಾಗಿ ಜೀವಿಸುತ್ತಿರುವ ಕೂಸ ತನ್ನ ಒಡಲಾಳದ ನೋವಿನ ಕಥೆಯನ್ನು ಬಿಚ್ಚಿಡದೆ ಪ್ರಭುತ್ವದ ಶಕ್ತಿಗಳಿಗೆ ಹೆದರಿ ಮರೆಮಾಚಿ ಜೀವನ ಸಾಗಿಸುತ್ತಿದೆ. ಒಟ್ಟಾರೆ ಹೇಳುವುದಾದರೆ ಕೂಸ ಜಾತಿಯು ತನ್ನತನವನ್ನು ಉಳಿಸಿಕೊಳ್ಳುವ ಪ್ರಯತ್ನವಿಲ್ಲದ ಧೋರಣೆಯಂತೆ ಕಾಣುತ್ತದೆ. ಈ ಹಿನ್ನಲೆಯಲ್ಲಿ ಕೂಸ ಜಾತಿ ಇದೆಯೆ? ಎಂಬ ಪ್ರಶ್ನೆಯನ್ನು ಸಮುದಾಯವೇ ಸೃಷ್ಟಿಸಿಕೊಂಡಿದೆ. ಜಾತಿಯ ಹೆಸರನ್ನು ಮರೆಮಾಚಿ ಆದಿದ್ರಾವಿಡ ಸಮುದಾಯದ ಹೆಸರಿನಿಂದ ಗುರುತಿಸಿಕೊಳ್ಳುತ್ತಿರುವುದು ಶೋಚನಿಯ ಸಂಗತಿಯಾಗಿದೆ. ಹೀಗಿರುವಾಗ ಕೂಸ ಜಾತಿಯ ಸಂಸ್ಕೃತಿಯನ್ನು ಉಳಿಸಿಕೊಳ್ಳುವವರು ಯಾರು? ಎಂಬ ಪ್ರಶ್ನೆ ಕಾಡುತ್ತದೆ. ಹೀಗೆ ಮುಂದುವರೆದರೆ ಕೂಸ ಜಾತಿಯು ಮುಂದಿನ ದಿನಗಳಲ್ಲಿ ಅಸ್ಮಿತೆಯ ಹುಡುಕಾಟಕ್ಕೆ ಪ್ರಯತ್ನ ಪಡಬೇಕಾಗುತ್ತದೆ.

**ಕೊನೆಟಿಪ್ಪಣಿಗಳು**

1. ಎಡ್ಗರ್ ಥರ್ಸ್ಟನ್ ಮತ್ತು ಕೆ.ರಂಗಾಚಾರಿ. (1909). ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ. ಸಂ.3 (ಕೆ), ಸರ್ಕಾರಿ ಮುದ್ರಣಾಲಯ, ಮದ್ರಾಸ್. ಪು.282.
2. ಎಡ್ಗರ್ ಥರ್ಸ್ಟನ್ ಮತ್ತು ಕೆ.ರಂಗಾಚಾರಿ. (1909). ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ. ಸಂ. 2 (ಸಿ–ಜೆ). ಸರ್ಕಾರಿ ಮುದ್ರಣಾಲಯ, ಮದ್ರಾಸ್. ಪು.345.
3. ಅದೇ, ಪು.344
4. ಅದೇ, ಪು.350
5. ಅದೇ, ಪು. 350–351
6. ತಳವಾರ ಎನ್.ಎಂ, (ಗೌ.ಸಂ) ಅರವಿಂದ ಮಾಲಗತ್ತಿ (ಪ್ರ.ಸಂ). (2014). ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–2, ದಲಿತ ಚಳುವಳಿ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪು.252.
7. ಕಮಲಾಕ್ಷ ಪಿ. (1994). ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ಪು.65.
8. ಅದೇ, ಪು.64.

**ಪರಾಮರ್ಶನಗಳು**


- ಇಂದಿರಾ ಹೆಗ್ಗಡೆ. (2014). ಅಳಿಯಕಟ್ಟು ಮತ್ತು ಬಾರ್ಕೂರು ಕುಂಡೋದರ: ಒಂದು ಅಧ್ಯಯನ. ಇತಿಹಾಸ ದರ್ಶನ, ಸಂ. 29.
- ಎಡ್ಗರ್ ಥರ್ಸ್ಟನ್ ಮತ್ತು ಕೆ.ರಂಗಾಚಾರಿ. (1909). ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ. ಸಂ. 2 (ಸಿ–ಜೆ). ಸರ್ಕಾರಿ ಮುದ್ರಣಾಲಯ, ಮದ್ರಾಸ್.
- ಎಡ್ಗರ್ ಥರ್ಸ್ಟನ್ ಮತ್ತು ಕೆ.ರಂಗಾಚಾರಿ. (1909). ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ. ಸಂ. 3 (ಕೆ). ಸರ್ಕಾರಿ ಮುದ್ರಣಾಲಯ, ಮದ್ರಾಸ್. ಪು.345.
- ಎಂಥೋವೆನ್. ಆರ್. ಇ. (1904). ಉತ್ತರ ಕನ್ನಡ ಜಿಲ್ಲೆಯ ಗ್ಯಾಸೇಟಿಯರ್. ಕರ್ನಾಟಕ ಗ್ಯಾಸೇಟಿಯರ್ ಇಲಾಖೆ, ಬೆಂಗಳೂರು.
- ಕಮಲಾಕ್ಷ ಪಿ. (1994). ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಜಿಲಾನಿ ಎಸ್. ಎ. (2010). ಉಡುಪಿ ಜಿಲ್ಲೆಯ ಗ್ಯಾಸೇಟಿಯರ್. ಕರ್ನಾಟಕ ಗ್ಯಾಸೇಟಿಯರ್ ಇಲಾಖೆ, ಬೆಂಗಳೂರು.
- ತಳವಾರ ಎನ್.ಎಂ, (ಗೌ.ಸಂ) ಅರವಿಂದ ಮಾಲಗತ್ತಿ (ಪ್ರ.ಸಂ). (2014). ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–2, ದಲಿತ ಚಳುವಳಿ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ದಕ್ಷಿಣ ಕನ್ನಡ ಜಿಲ್ಲೆಯ ಗ್ಯಾಸೇಟಿಯರ್. ***(1905).*** ಕರ್ನಾಟಕ ಗ್ಯಾಸೇಟಿಯರ್ ಇಲಾಖೆ, ಬೆಂಗಳೂರು.
- ಭಾರತದ ಜನಗಣತಿ ವರದಿ – 2011, ರಿಜಿಸ್ಟರ್ ಜನರಲ್ ಆಫ್ ಇಂಡಿಯಾ, ನವದೆಹಲಿ.


**ಅನುಬಂಧ 1: ಪದಗಳ ಅರ್ಥ/ವಿವರಣೆ**

***ಘಟ್ಟದ ಕೆಳಭಾಗ:*** ಉಡುಪಿ, ದಕ್ಷಿಣಕನ್ನಡ, ಉತ್ತರ ಕನ್ನಡ ಜಿಲ್ಲೆಗಳು

***ಘಟ್ಟದ ಮೇಲಿನಭಾಗ:*** ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಕೊಡಗು, ಇತರೆ ಜಿಲ್ಲೆಗಳು


***ಗೆರಟೆ:*** ತೆಂಗಿನ ಚಿಪ್ಪು, ***ಪಾಂಡ್ಯ:*** ಹಡಗು, ತೆಪ್ಪ.

***ಬೆಳಚು:*** ಕಪ್ಪೆ ಚಿಪ್ಪು, ಸಮುದ್ರದ ಚಿಪ್ಪು, ಶಿಂಪಿ; ***ಕುಂಡೋದರ:*** ಮಹಿಷಾಸುರ

**ಅನುಬಂಧ 2: ವಕ್ತೃ ವಿವರ**

| ಕ್ರ.ಸಂ | ಹೆಸರು | ಲಿಂಗ | ವಯಸ್ಸು | ಗ್ರಾಮದ ಹೆಸರು | ತಾಲೂಕು | ಜಿಲ್ಲೆ |
|---|---|---|---|---|---|---|
| 1 | ರಮೇಶ ಕೋಟಿವನ್ | ಗಂಡು | 48 | ಕೆಳಕಾಲ್ ಬಿಟ್ಟು | ಉಡುಪಿ | ಉಡುಪಿ |
| 2 | ನರಸಿಂಹ ತಂದೆ ಗಣಪ | ಗಂಡು | 59 | ಪಡುಕೇರಿ | ಬ್ರಹ್ಮಾವರ | ಉಡುಪಿ |
| 3 | ಪದ್ದು | ಹೆಣ್ಣು | 65 | ಪಡುಕೇರಿ | ಬ್ರಹ್ಮಾವರ | ಉಡುಪಿ |
| 4 | ರತ್ನ ಗಂಡ ಸುಬ್ರಮಣ್ಯ | ಹೆಣ್ಣು | 53 | ಹಿರೇಜೆಡ್ಡು | ಬ್ರಹ್ಮಾವರ | ಉಡುಪಿ |
| 5 | ಶೇಶಿ ಗಂಡ ಗೋವಿಂದ | ಹೆಣ್ಣು | 110 | ಬೆಳಲೆ | ಶಿರಸಿ | ಉತ್ತರ ಕನ್ನಡ |
| 6 | ಜಯಂತಿ ಗಂಡ ಶಂಕರ | ಹೆಣ್ಣು | 35 | ಬೆಳಲೆ | ಶಿರಸಿ | ಉತ್ತರ ಕನ್ನಡ |
| 7 | ಶಂಕರ ತಂದೆ ಗೋವಿಂದ | ಗಂಡು | 50 | ಬೆಳಲೆ | ಶಿರಸಿ | ಉತ್ತರ ಕನ್ನಡ |
| 8 | ಲಕ್ಷ್ಮಣ ತಂದೆ ಗೋವಿಂದ | ಗಂಡು | 45 | ಬೆಳಲೆ | ಶಿರಸಿ | ಉತ್ತರ ಕನ್ನಡ |
| 9 | ಗಿರೀಶ ತಂದೆ ವೆಂಕಟ | ಗಂಡು | 32 | ಬೆಳಲೆ | ಶಿರಸಿ | ಉತ್ತರ ಕನ್ನಡ |
| 10 | ರಾಮ ತಂದೆ ಗೋವಿಂದ | ಗಂಡು | 52 | ಬೆಳಲೆ | ಶಿರಸಿ | ಉತ್ತರ ಕನ್ನಡ |
| 11 | ಮಾರುತಿ.ಎಂ ತಂದೆ ಮಂಜಪ್ಪ | ಗಂಡು | 45 | ಬನವಾಸಿ | ಶಿರಸಿ | ಉತ್ತರ ಕನ್ನಡ |
| 12 | ರಾಮಚಂದ್ರ | ಗಂಡು | 59 | ಮಂಗಳಪೇಟೆ | ಮಂಗಳೂರು | ದಕ್ಷಿಣ ಕನ್ನಡ |

**ಅನುಬಂಧ 3: ಛಾಯಾಚಿತ್ರಗಳು**




ಪೂಜಗೇರಿ ಗ್ರಾಮದಲ್ಲಿರುವ ಬೀದಿಬೀರ ದೇವಸ್ಥಾನದ ಅಂಗಳದಲ್ಲಿರುವ ಕುಸಲಾ ಮತ್ತು ಹೋಲೆಟರ್ ದೈವಗಳ ದೇವಸ್ಥಾನ



ಕುಸಲಾ ಮತ್ತು ಹೋಲೆಟರ್ ದೈವಗಳು



ಪಂಜುರ್ಲಿ ದೈವದ ಜೊತೆಯಲ್ಲಿ ಪಡುಕೇರಿ ಗ್ರಾಮದ ನರಸಿಂಹ



ಜಟ್ಟಿಗ ದೈವಗಳು



ಕೂಸ ಜಾತಿಯವರ ಮನೆಯ ಮಾದರಿ



ಭಟ್ಕಳದ ಸೋಡಿಗದ್ದೆಯ ಮಹಾಸತಿ ದೇವಸ್ಥಾನದಲ್ಲಿರುವ ಜಟ್ಟಿಗ ದೈವಗಳು (ಎಡ ಭಾಗದಲ್ಲಿ)



ಇದ್ದಿಲು ಮಿಶ್ರಿತ ಬೆಳಚು ಮತ್ತು ಬೆಳಚು ಸುಣ್ಣದ ಭಟ್ಟಿ



ಬೆಳಚು ಸುಣ್ಣದ ಭಟ್ಟಿಯ ಹೊರನೋಟ